ಒಳ್ಳೆಯದು. ಅದರ ಬಗ್ಗೆ ನಾವು ವಿಚಾರ ಮಾಡುತ್ತೇವೆ. ಪಶ್ಚಿಮ ಘಟ್ಟದಲ್ಲಿ, ಅದು ಮೂರ ಜಿಲ್ಲೆಯಲ್ಲಿ ನಡೆಯುತ್ತಿದೆ. ಅವುಗಳು ಕೊಡಗು ಕಾರವಾರ, ಚಿಕ್ಕಮಗಳೂರು. ಶಿವಮೊಗ್ಗ ಮತ್ತ ಚಿಕ್ಕಮಗಳೂರು ಈಗ ತೆಗೆದು ಕೊಂಡಿದ್ದೇವೆ. ಅದು ವ್ಯವಸ್ಥಿತ ರೂಪದಲ್ಲಿ ನಡೆಯುತ್ತಿದೆ. ಅದ ಬಗ್ಗೆ ಸಂಕೋಚ ಏನಿಲ್ಲ. ಕಾರ್ಯಕ್ರಮಗಳು ನಡೆಯುತ್ತಿವೆ. ಅದರ ಬಗ್ಗೆ ತಾವು ಮತ್ತು ಆರ್‌ಡಿಪಿಆರ ಇಲಾಖೆ ಒಟ್ಟಿಗೆ ಮಾಡುತ್ತಿದ್ದೇವೆ.

ಬೈಲಹೊಂಗಲ ಸರ್ಕಾರಿ ಕಾಟೇಜ್ ಆಸ್ಪತ್ರೆ ಸಿಬ್ಬಂದಿ ಭರ್ತಿ

410 - ಶ್ರೀ ಮಹಾಂತೇಶ್ ಎಸ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆರೋಗ್ಯ ಮತ್ತ ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಬೆಳಗಾವಿ ಜಿಲ್ಲೆ ಬೈಲಹೊಂಗಲ ಸರ್ಕಾರಿ ಕಾಟೇಜ್ ಆಸ್ಪತ್ರೆಯಲ್ಲಿ ಕರ್ನಾಟಕ ಆರೋಗ್ ಪ್ಯಾಟರ್ನ್ ಪ್ರಕಾರ ಸಿಬ್ಬಂದಿ ಇರುವ ಸಂಗತಿ ನಿಜವೇ?*

2) *ಅವಶ್ಯಕ ಇರುವ ಹುದ್ದೆಗಳನ್ನು ಕೂಡಲೇ ನಿಯಮಿಸಲು ಆದೇಶ ನೀಡಿದ ಸಂಗ ನಿಜವೇ?*

3) *ಹಾಗಿದ್ದಲ್ಲಿ ಅವಶ್ಯಕತೆ ಇರುವ ಹುದ್ದೆಗಳನ್ನು ಕರ್ನಾಟಕ ಆರೋಗ್ಯ ಪ್ಯಾಟರ್ನ್ ಪ್ರಕಾ ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ ?*

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಕರ್ನಾಟಕ ಆರೋಗ್ಯ ಪ್ಯಾಟರ್ನ್ ನಾರ್ಮ್ಸ್ ಪ್ರಕಾರ ಸಿಬ್ಬಂದಿ ಮಂಜೂರಾಗಿರುವುದಿಲ್ಲ

2) ಇಲ್ಲ

3) 1997-98ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಅನುಮೋದನೆಯೊಂದಿಗೆ ನವೀಕರಿಸಿದ ಪ್ರಸ್ತಾವನೆ ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಹಾಂತೇಶ್ ಎಸ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಆರೋಗ್ಯ ಪ್ಯಾಟರ್ನ್ ನಾರ್ಮ್ಸ್ ಪ್ರಕಾರ ಇನ್ನು ಅಲ್ಲಿ ಸಿಬ್ಬಂದಿ ಮಂಜೂರಾಗಿಲ್ಲ ಎಂದು ಹೇಳಿದ್ದಾರೆ. ಇನ್ನು ಬೈಲಹೊಂಗಲ ಆಸ್ಪತ್ರೆಯಲ್ಲಿ ಸರಿಯಾದ ಮೆಟೇರಿಯಲ್ಸ್ ಇಲ್ಲ, ಸ್ಟಾ ಫ್ ಮತ್ತು ಡಾಕ್ಟರ್ಸ್ ಇಲ್ಲ. ಈಗಾಗಲೇ ಜಿಲ್ಲಾ ಪಂಚಾಯಿತಿಯ ಅನುಮೋದನೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಎಷ್ಟು ದಿನದಲ್ಲಿ ಆ ಪೋಸ್ಟ್‌ಗೆ ಮಂಜೂರಾತಿ ಕೊಟ್ಟು ಪೋಸ್ಟಿಂಗ್ಸ್ ಮಾಡುತ್ತೀರಿ ಎಂದು ಮಾನ್ಯ ಸಚಿವರಲ್ಲಿ ಹೇಳುತ್ತೇನೆ.

ಶ್ರೀ ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತಿನಿಂದ ಇನ್ನು ನಮಗೆ ಅನುಮೋದನೆ ಬಂದಿಲ್ಲ. ಅದು ಬಂದ ತಕ್ಷಣ ಮಾಡಿಸಿಕೊಡುತ್ತೇನೆ.

MR. SPEAKER : He is an young member. ಅರ್ಜೆಂಟ್ ತರಿಸಿ ಮಾಡಿಸಿಕೊಡಿ. ಅವರು ಮಾಡಿಸಿಕೊಡುತ್ತಾರೆ.

ಶ್ರೀ ಹೆಚ್.ಸಿ. ಮಹದೇವಪ್ಪ : ಮೂರು ಜನ ಡಾಕ್ಟರ್‌ಗಳು ಈಗಾಗಲೇ ಅಲ್ಲಿ ಕೆಲಸ ಮಾಡುತ್ತಿದ್ದಾರೆ.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಸಫಾರೀ ಯೋಜನೆ

411 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಮೈಸೂರು ನಗರದ ಚಾಮುಂಡಿ ಬೆಟ್ಟದಲ್ಲಿ ಸಫಾರಿ ಯೋಜನೆ ಕೈಗೊಳ್ಳುವ ಆಲೋಚನೆ ಏನಾದರೂ ಸರ್ಕಾರದ ಮುಂದಿದೆಯೇ?*

2) *ಹಾಗಿದ್ದಲ್ಲಿ ಎಷ್ಟು ವೆಚ್ಚದಲ್ಲಿ ಸದರಿ ಯೋಜನೆ ಕಾರ್ಯರೂಪಕ್ಕೆ ಬರುತ್ತದೆ?*

3) *ಸದರಿ ಯೋಜನೆಯಡಿಯಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸಗಳು ಒಳಗೊಂಡಿದೆ?*

4) *ಹಾಗಿದ್ದಲ್ಲಿ ಈ ಯೋಜನೆ ಯಾವಾಗ ಪ್ರಾರಂಭಗೊಳ್ಳುತ್ತದೆ?*

5) *ಈ ಕೆಲಸದ ನಿರ್ವಹಣೆ ಯಾರು ಮಾಡುವರು?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

1) ಹೌದು

2) ಯೋಜನೆಯ ಅಂದಾಜು ವೆಚ್ಚ 4.00 ಕೋಟಿ ರೂ.ಗಳು.

3) ಸದ್ರಿ ಯೋಜನೆಯಡಿಯಲ್ಲಿ ಬಿಳಿ ಹುಲಿ ಸಫಾರಿ, ಕಾಡುಕೋಣ ಸಫಾರಿ (ಬೈಸನ್), ನವಿಲುಸಫಾರಿ ಹಾಗೂ ಕರಡಿ ಸಫಾರಿ ಇತ್ಯಾದಿ ಒಳಗೊಂಡಿರುತ್ತದೆ.

4) ಸದ್ರಿ ಯೋಜನೆ ಇನ್ನೂ ಪರಿಶೀಲನಾ ಹಂತದಲ್ಲಿದೆ.

5) ಮೃಗಾಲಯ ಪ್ರಾಧಿಕಾರ, ಮೈಸೂರು ಈ ಕೆಲಸವನ್ನು ನಿರ್ವಹಿಸುತ್ತದೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಚಾಮುಂಡಿ ಬೆಟ್ಟದ ಸಫಾರಿ ಯೋಜನೆಯಲ್ಲಿ ಯಾವ ರೀತಿ ಅಭಿವೃದ್ಧಿ ಕೆಲಸವಿದೆ ಎಂದು ಕೇಳಿರುವುದಕ್ಕೆ ಬಿಳಿ ಹುಲಿ ಸಫಾರಿ, ಕಾಡು ಕೋಣ ಸಫಾರಿ ಹಾಗೂ ಕರಡಿ ಸಫಾರಿ ಎಂದು ಹೇಳಿದ್ದಾರೆ. ಆದರೆ ಸ್ಕೀಮ್‌ನ ಪ್ರಕಾರ ಅದು ಹರ್ಬಿವೋರಸ್ ಸಫಾರಿ ಆಗಬೇಕು. ಎಂದರೆ ಕೇವಲ ಹುಲ್ಲನ್ನು ತಿನ್ನುವಂತಹ ಪ್ರಾಣಿಗಳ ಸಫಾರಿ ಮಾತ್ರ ಆಗಬೇಕು. ಇದರಲ್ಲಿ ಕ್ರೂರ ಮೃಗಗಳ ಸಫಾರಿಯನ್ನು ಮಾಡುವುದಕ್ಕೆ ಔಚಿತ್ಯವಾದಂತಹ ಜಾಗವೇ ಎಂದು ಒಂದು ಪ್ರಶ್ನೆ? ಎರಡನೆ ಪ್ರಶ್ನೆ ಅರಣ್ಯ ಇಲಾಖೆಯಿಂದ ಈಗಾಗಲೇ ಮೃಗಾಲಯಕ್ಕೆ 56 ಹೆಕ್ಟೇರ್